(ನಮ್ಮ ಕರುಣೆಯ ಮಧುವು ಇತರರ ನಿಷ್ಕರುಣೆಯ ಮುಳ್ಳನ್ನು ಮೊಂಡಾಗಿಸುತ್ತದೆ.)

ನಮ್ಮ ಕರುಣಾಭಾವವು ನಮ್ಮ ಸುತ್ತಲಿನ ವಾತಾವರಣವನ್ನು ಬದಲಾಯಿಸಬಲ್ಲದು ಎಂಬುದನ್ನು ಪ್ರಸಿದ್ಧ ನರತಜ್ಞರಾದ ಯಾಂಡ್ರೀವ್ ನೀವ್‌ಬರ್ಗ್ ಅವರು ಹೇಳುತ್ತಾರೆ : ''ನಮ್ಮ ಸ್ವಾರ್ಥ ಮೆದುಳನ್ನು ಪರಿವರ್ತಿಸುವ ನಿರ್ದಿಷ್ಟವಾದ ಏನಾದರೂ ವಿಧಾನವಿದೆಯೆ? ನರವಿಜ್ಞಾನದ ಪ್ರಕಾರ ಉತ್ತರವು ಆಶ್ಚರ್ಯಕರವಾಗಿ ಸರಳ. ನಾವು ಮಾಡಬೇಕಾದುದು ಇಷ್ಟೇ: ಪ್ರಜ್ಞಾಪೂರ್ವಕವಾಗಿ ಇತರರ ವಿಷಯದಲ್ಲಿ ಕರುಣೆ ಮತ್ತು ಔದಾರ್ಯವನ್ನು ವ್ಯಕ್ತಪಡಿಸುವುದು. ನಾವು ಹೆಚ್ಚು ದಯಾಪೂರ್ಣರಾದಷ್ಟೂ ನಮ್ಮ ಸುತ್ತಲಿನವರೂ ಹೆಚ್ಚು ಉದಾರಿಗಳಾಗುತ್ತಾರೆ ಎಂಬುದನ್ನು ಅಧ್ಯಯನವು ತೋರಿಸಿಕೊಟ್ಟಿದೆ.'' *(How God can change your Brain, p.136-37)*

**ನಿರ್ಮಮ:** ಮಮಕಾರವಿಲ್ಲದವನು, ಯಾವುದರ ವಿಷಯದಲ್ಲಿಯೂ 'ಇದು ನನ್ನದು' ಎಂಬ ಸ್ವಾಧೀನತಾಭಾವವಿಲ್ಲದವನು. ಇದಕ್ಕೆ ಕಾರಣವನ್ನು ಮುಂದಿನ ಗುಣವು ಸೂಚಿಸುತ್ತದೆ ಅವನು ನಿರಹಂಕಾರಿಯಾಗಿರುತ್ತಾನೆ. 'ನಾನು' ಎಂಬ ಭಾವವಿಲ್ಲದಿರುವುದರಿಂದ 'ನನ್ನದು' ಎಂಬ ಭಾವವೂ ಇರುವುದಕ್ಕೆ ಸಾಧ್ಯವಿಲ್ಲ. ಮೊದಲು ಅಜ್ಞಾನದಿಂದಾಗಿ 'ನಾನು' ಎಂಬ ಭಾವವು ಉದಿಸುತ್ತದೆ. ಅನಂತರ ಈ ದೇಹೇಂದ್ರಿಯ ಮನಸ್ಸುಗಳು ನನ್ನವು ಎಂಬ ತಾದಾತ್ಮ್ಯವುಂಟಾಗುತ್ತದೆ. ಮುಂದೆ ಇವುಗಳಿಗೆ ಸಂಬಂಧಪಟ್ಟಂತೆ ಮನೆ ಆಸ್ತಿ ಸ್ಥಾನ ಅಧಿಕಾರಗಳು ನನ್ನವು ಎಂಬ ತೀವ್ರ ಆಸಕ್ತಿ ಉಂಟಾಗುತ್ತದೆ. ಇದು ಹೀಗೆ ವಿಸ್ತರಿಸುತ್ತ ಹೋಗುತ್ತದೆ. ಸ್ವಾಮಿ ಯತೀಶ್ವರಾನಂದರು ಒಂದು ಹಾಸ್ಯಪ್ರಸಂಗದ ಮೂಲಕ ಇದನ್ನು ಸುಂದರವಾಗಿ ವಿವರಿಸುತ್ತಾರೆ. ಒಬ್ಬ ಅಧಿಕಾರಿಯು ಇದ್ದನು. ಅವನಿಗೆ ಅನೇಕ ಪದಕಗಳು ಬಂದಿರುತ್ತವೆ. ಅವುಗಳನ್ನೆಲ್ಲ ಅವನು ತನ್ನ ಕೋಟಿನ ಮೇಲೆ ಲಗತ್ತಿಸಿಕೊಂಡಿರುತ್ತಾನೆ. ಅದರಲ್ಲಿ ಮೊದಲನೆಯದು ಸ್ವಲ್ಪ ದೊಡ್ಡದಾದ ಚಿನ್ನದ ಪದಕ. ಯಾರೊ ಒಬ್ಬರು ಅವನನ್ನು ಒಮ್ಮೆ ಕೇಳಿದರು, ''ಹೇಗೆ ನಿಮಗೆ ಇಷ್ಟೊಂದು ಪದಕಗಳು ಬಂದವು?'' ಎಂದು. ಅವನು ಹೇಳಿದ : ''ಈ ಚಿನ್ನದ ಪದಕ ಹೇಗೋ ಅಚಾತುರ್ಯದಿಂದ ಲಭಿಸಿತು, ಅನಂತರ ಉಳಿದ ಪದಕಗಳು ಒಂದಾದ ಮೇಲೊಂದು ಬರತೊಡಗಿದವು.''

'ಭಕ್ತಿಸೌರಭ' ಎಂಬ ಪುಸ್ತಕದಲ್ಲಿ ಮಮಕಾರವೇ ಯಮಪಾಶವೆಂಬುದನ್ನು ಸ್ವಾರಸ್ಯವಾಗಿ ವಿವರಿಸಲಾಗಿದೆ. ''ಮೃತನಾದ ಪ್ರತಿಯೊಬ್ಬನ ಪ್ರಾಣವನ್ನೂ ಯಮನು ತನ್ನ ಹಗ್ಗದಿಂದ ಬಂಧಿಸಿ ಯಮಲೋಕಕ್ಕೆ ಕೊಂಡೊಯ್ಯುತ್ತಾನೆಂಬುದು ಪುರಾಣದ ಮಾತು. ಸಾಯುವವರೆಲ್ಲರ ಪ್ರಾಣಗಳಿಗೂ ಹಗ್ಗಗಳು ಬೇಕೆಂದರೆ ಯಮಧರ್ಮರಾಯನು ಒಂದು ದೊಡ್ಡ ಹಗ್ಗದ ಕಾರ್ಖಾನೆಯನ್ನು ಇಟ್ಟರೂ ಸಾಲದು, ಆದರೆ ಹಾಗೇನಿಲ್ಲ. ಪ್ರತಿಯೊಬ್ಬನ ಯಮಪಾಶವೂ ಅವನವನ ಕೊರಳಲ್ಲೇ ಇದೆ. ಅದೇ ಮಮಕಾರ.''

ಮೊದಲು ಮಮಕಾರದಿಂದ ಯಾವುದಾದರೊಂದನ್ನು ತಬ್ಬಿಕೊಳ್ಳುತ್ತೇವೆ. ಅನಂತರ ನಮಗದು ಬೇಡವಾದರೂ ಅದು ನಮ್ಮನ್ನು ಬಿಡುವುದಿಲ್ಲ. ನಾವು ಬೆಳೆಸಿಕೊಂಡ ಆಸಕ್ತಿಯು ಸಂಸ್ಕಾರರೂಪದಲ್ಲಿ ನಮ್ಮನ್ನು ಕಾಡತೊಡಗುತ್ತದೆ. ನಾವು ಆಸಕ್ತಿಯಿಂದ ಒಂದು ನಾಯಿಯನ್ನು ಸಾಕುತ್ತೇವೆ. ಆಮೇಲೆ ಅದು ಬೇಡವೆನಿಸಿ ಅದನ್ನು ಮನೆಯಿಂದ ಎಷ್ಟೇ ಓಡಿಸಿದರೂ ಅದು ಹೋಗುವುದಿಲ್ಲ, ಮತ್ತೆ ಹಿಂತಿರುಗಿಬರುತ್ತದೆ. ದೂರಪ್ರದೇಶಕ್ಕೆ ತೆಗೆದುಕೊಂಡು ಹೋಗಿ ಬಿಟ್ಟರೂ ಹೇಗೊ ಮರಳಿ ಬರುತ್ತದೆ. ಅಧಿಕಾರವನ್ನು ಅತ್ಯಾಸಕ್ತಿಯಿಂದ ತಬ್ಬಿಕೊಂಡರೆ ಅಧಿಕಾರ ಹೋದರೂ ಅದರ ಆಸಕ್ತಿಹೋಗುವುದಿಲ್ಲ – ಬೇತಾಳದಂತೆ ಕಾಡುತ್ತದೆ. ನದಿಯು ಪ್ರವಾಹದಿಂದ ಉಕ್ಕಿ ಹರಿಯುತ್ತಿತ್ತು. ಅನೇಕ ವಸ್ತುಗಳು ತೇಲಿಬರುತ್ತಿದ್ದವು. ದಡದಲ್ಲಿ ಕೆಲವರು ಅಲೆಮಾರಿ ಸಾಧುಗಳು ಏನೇನು ವಸ್ತುಗಳು ಬರುತ್ತಿವೆ ಎಂಬುದನ್ನು ನೋಡುತ್ತಿದ್ದರು. ಒಂದು ಕಂಬಳಿಯು ತೇಲಿಬರುತ್ತಿರುವುದು ಕಾಣಿಸಿತು. ಕೂಡಲೇ ಒಬ್ಬ ಸಾಧುವು ನದಿಗೆ ಧುಮುಕಿದ. ಈಜಿಕೊಂಡು ಹೋಗಿ ಕಂಬಳಿಯನ್ನು ಹಿಡಿದುಕೊಂಡನು. ಆದರೆ ಅವನು ಹಿಂತಿರುಗಿ ಬರುತ್ತಲೇ ಇಲ್ಲ. ದಡದಲ್ಲಿ ನಿಂತ ಸಾಧುಗಳು ''ಕಂಬಳಿಯನ್ನು ಬಿಟ್ಟು ಬಾ'' ಎಂದು ಕೂಗತೊಡಗಿದರು. ''ಕಂಬಳಿ ನನ್ನನ್ನು ಬಿಡುತ್ತಿಲ್ಲ'' ಎಂದು ಅವನು ಸಂಕಟದಿಂದ ಕೂಗಿಕೊಂಡನು. ಅದು ಕಂಬಳಿ ಅಲ್ಲ, ಕರಡಿ! ಹೀಗೆಯೇ ಮಮಕಾರದ ದೆಸೆಯಿಂದ ಸಂಸಾರವು ನಮಗೆ ಅಂಟಿಕೊಳ್ಳುತ್ತದೆ. ಭಕ್ತನು ಮಮಕಾರ ರಹಿತನಾಗಿರಬೇಕು.

*(ಮುಂದುವರಿಯುವುದು)* ✷

## ನಿತ್ಯಾನಂದರ ಹಿರಿಮೆ

ಶ್ರೀಚೈತನ್ಯ ಮಹಾಪ್ರಭುಗಳ ಸಂಗಾತಿಯಾದ ನಿತ್ಯಾನಂದರು ಕೃಷ್ಣನಾಮವನ್ನು ಉಚ್ಚರಿಸುತ್ತಾ ಬಂಗಾಳದ ಊರುಗಳಲ್ಲಿ ಸಂಚರಿಸುತ್ತಿದ್ದರು. ದಾರಿಯಲ್ಲಿ ಜಗಾಯಿ ಮತ್ತು ಮಧಾಯಿ ಎಂಬಿಬ್ಬರು ದುಷ್ಟರು ನಿತ್ಯಾನಂದರನ್ನು ಕಂಡು ಅವರನ್ನು ''ನೀವು ಯಾರು?'' ಎಂದು ಕೇಳಿದರು. ಅದಕ್ಕೆ ನಿತ್ಯಾನಂದರು ''ಶ್ರೀಕೃಷ್ಣನ ದಿವ್ಯನಾಮವನ್ನು ಉಚ್ಚರಿಸಿ'' ಎಂದರು. ಕೋಪದಿಂದ ಆ ದುಷ್ಟರು ಅವರನ್ನು ಚೆನ್ನಾಗಿ ಥಳಿಸತೊಡಗಿದರು. ಗಾಯದಿಂದ ರಕ್ತ ಸುರಿಯುತ್ತಿದ್ದರೂ ನಿತ್ಯಾನಂದರು ''ಹರಿನಾಮವನ್ನು ಉಚ್ಚರಿಸಿ'' ಎನ್ನುವುದನ್ನು ಬಿಡಲಿಲ್ಲ. ಅವರ ಮನಃಪರಿವರ್ತನೆಯಾಗುವವರೆಗೂ ಅವರು ಹಾಗೆ ಹೇಳುತ್ತಲೇ ಇದ್ದರು. ಅಲ್ಲಿಗೆ ಶ್ರೀಚೈತನ್ಯರೂ ಬಂದರು. ಕೊನೆಗೆ ದುಷ್ಟರಿಬ್ಬರೂ ಮಹಾಭಕ್ತರಾಗಿ ಪರಿವರ್ತನೆ ಹೊಂದಿದರು. *(ಸಾಧಾರ)*